

# ಗೋಲ್ಡನ್ ಗರ್ಲ್ ಜ್ಯೋತಿ ಸಣ್ಣಕ್ಕಿ

**ಹುಬ್ಬಳ್ಳಿಯ ಜ್ಯೋತಿ ಸಣ್ಣಕ್ಕಿ ಅವರಿಗೆ ಆಸರೆಯಿಲ್ಲದೆ ತಮ್ಮ ಕಾಲುಗಳ ಮೇಲೆ ನಿಲ್ಲುವುದು ಸಾಧ್ಯವಿಲ್ಲದಿದ್ದರೂ, ಅವರ ಮನೋಬಲವೇ ಶೂಟಿಂಗ್‌ನಲ್ಲಿನ ಬಹುದೊಡ್ಡ ಸಾಧನೆಗೆ ಕಾರಣವಾಗಿದೆ.**

■ ಕೃಷ್ಣಿ ಶಿರೂರ

ಹಾಯ್, ಗುಡ್ ಮಾರ್ನಿಂಗ್ ಜ್ಯೋತಿ... ನೀವು ಜಗತ್ತಿನ ಮೊದಲ ಆನ್‌ಲೈನ್ ಶೂಟಿಂಗ್‌ನಲ್ಲಿ ಅವಕಾಶ ಗಿಟ್ಟಿಸಿಕೊಂಡಿದ್ದಕ್ಕೆ ಕಂಗ್ರಾಜ್ಯುಲೇಷನ್....ಹೇಗಿದ್ದೀರಿ... ಎಂಬ ಮಾತಿಗೆ ದೊಡ್ಡ ನಗುವಿನೊಂದಿಗೆ ಪ್ರತಿಕ್ರಿಯಿಸಿದ ಜ್ಯೋತಿ ಸಣ್ಣಕ್ಕಿ, ಹೌದು; ಇದೊಂದು ನನ್ನ ಪಾಲಿಗೆ ಒದಗಿಬಂದ ಉತ್ತಮ ಅವಕಾಶ ಇದು ಎಂದರು.

ಕೊರೊನಾ ಎಲ್ಲೆಡೆ ತನ್ನ ಕಬಂಧಬಾಹು ಚಾಚಿದೆ. ಕ್ರೀಡಾ ಕ್ಷೇತ್ರ ಕೂಡ ಹೊರತಾಗಿಲ್ಲ. ಈ ಕೊರೊನಾ ಆತಂಕದ ನಡುವೆಯೇ ಕಳೆದ ವಾರ ಇಂಟರ್‌ನ್ಯಾಷನಲ್ ಆನ್‌ಲೈನ್ ಶೂಟಿಂಗ್ ಲೀಗ್ ಆರಂಭಗೊಂಡಿತು. ಆ ಲೀಗ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ ತಂಡದಲ್ಲಿ ಹುಬ್ಬಳ್ಳಿ ಹುಡುಗಿ ಜ್ಯೋತಿ ಸಣ್ಣಕ್ಕಿ ಕೂಡ ಇದ್ದಾರೆ.

ಮೂರು ವರ್ಷಗಳ ಅವಧಿಯಲ್ಲಿ ಶೂಟಿಂಗ್‌ನಲ್ಲಿ ಜ್ಯೋತಿ ತೋರಿದ ಸಾಧನೆ ಅಮೋಘ. ಒಟ್ಟು 16 ಸ್ಪರ್ಧೆಗಳಲ್ಲಿ ಉತ್ತಮ ಪ್ರದರ್ಶನ ತೋರಿ ಬಂಗಾರ ಪದಕಗಳನ್ನೇ ಬಾಚಿಕೊಂಡ ಗರಿಮೆ ಜ್ಯೋತಿಯವರದು. ಜ್ಯೋತಿ ಸಾಧನೆ ಮತ್ತಷ್ಟು ಗಮನ ಸೆಳೆಯಲು ಕಾರಣ ಅವರ ದೈಹಿಕ ನ್ಯೂನತೆ. ಇದೇ ದೈಹಿಕ ನ್ಯೂನತೆಯಿಂದ ಅವರು ಪ್ಯಾರಾ ಶೂಟರ್ ಆಗಿ ಗುರುತಿಸಿಕೊಂಡಿದ್ದಾರೆ.

ಮೂರು ವರ್ಷದಾಕಿಯಾಗಿದ್ದಾಗ ಜ್ಯೋತಿ ಪೋಲಿಯೊ ಪೀಡಿತರಾಗಿ ತಮ್ಮ ಎಡಗಾಲಿನ ಶಕ್ತಿಯನ್ನು ಕಳೆದುಕೊಂಡರು. ಆದರೂ ಧೈರ್ಯಗುಂದಲಿಲ್ಲ. ಶಾಲೆಗೆ ಹೋಗಿ ಎಲ್ಲರಂತೆ ಕಲಿತರು. ಏನಾದರೂ ಸಾಧಿಸಲೇಬೇಕೆಂಬ ಕನಸನ್ನು ಕಣ್ತುಂಬಿಕೊಂಡಿರುವಾಗಲೇ, ದುರ್ದೈವ